# ಕನ್ನಡ ಸಾಹಿತ್ಯಕ್ಕೆ ರಾಣೇಬೆನ್ನೂರಿನ ಸಾಹಿತಿ ಸು.ರಂ.ಎಕ್ಕುಂಡಿಯವರ ಕೊಡುಗೆ

*ಶ್ರೀನಿವಾಸ.ಎಸ್. ನಲವಾಗಲ*
*ಸಂಶೋಧನಾ ವಿದ್ಯಾರ್ಥಿ*
*ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ*
*ಕನ್ನಡ ವಿಶ್ವ ವಿದ್ಯಾಲಯ – ಹಂಪಿ*

ಸು.ರಂ. ಎಕ್ಕುಂಡಿಯವರು ಕನ್ನಡದ ಅತ್ಯಂತ ಶ್ರೇಷ್ಠ ಕಥನ ಕವನಗಳ ಕವಿ ಮತ್ತು ಸಾಹಿತಿ. ಇವರ ಪೂರ್ಣ ಹೆಸರು ಸುಬ್ಬಣ್ಣ ರಂಗನಾಥ ಎಕ್ಕುಂಡಿ. ಇವರು ಹುಟ್ಟಿದ್ದು 1923 ಜನವರಿ 20 ರಂದು ಹಾವೇರಿ ಜಿಲ್ಲೆ ರಾಣೇಬೆನ್ನೂರಿನಲ್ಲಿ ಜನಿಸಿದರು. 1944 ರಲ್ಲಿ ಬಿ.ಎ, ಪದವಿ ಪಡೆದ ಎಕ್ಕುಂಡಿಯವರು ಉತ್ತರಕನ್ನಡ ಜಿಲ್ಲೆಯ ಬಂಕಿಕೊಡ್ಲದಲ್ಲಿ ಪ್ರೌಢಶಾಲೆಯ ಅಧ್ಯಾಪಕರಾದರು.

**ಇವರ ಕೃತಿಗಳು :**

***ಕಾವ್ಯ***

- ಶ್ರೀ ಅನಂದತೀರ್ಥರು (ಖಂಡಕಾವ್ಯ)– 1953
- ಸಂತಾನ– 1953
- ಹಾವಾಡಿಗರ ಹುಡುಗ– 1967
- ಮತ್ಸ್ಯಗಂಧಿ– 1975
- ಬೆಳ್ಳಕ್ಕಿಗಳು – 1982
- ಕಥನಕವನಗಳು
- ಕಥನಕವನ – 1985
- ಬಕುಲದ ಹೂಗಳು – 1991

***ಕಥಾಸಂಕಲನ :*** ನೆರಳು – 1960

***ಕಾದಂಬರಿ :*** ಪ್ರತಿಬಿಂಬಗಳು

***ಪರಿಚಯ :*** ಪು.ತಿ.ನ (ವಿಮರ್ಶೆ)

***ಅನುವಾದ :*** ಎರಡು ರಶಿಯನ್ ಕಾದಂಬರಿಗಳು

***ಪುರಸ್ಕಾರ :***

- ‘ಲೆನಿನ್ನರ ನೆನಪಿಗೆ’ ಎನ್ನುವ ಕೃತಿಗೆ 1970 ರಲ್ಲಿ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ ಲಭಿಸಿದೆ.
- ‘ಮತ್ಸ್ಯಗಂಧಿ’ ಕವನಸಂಕಲನಕ್ಕೆ 1975 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ ಲಭಿಸಿದೆ.
- ‘ಬೆಳ್ಳಕ್ಕಿಗಳು’ ಹಸ್ತಪ್ರತಿಗೆ 1982 ರಲ್ಲಿ ಮುದ್ದಣ ಸ್ಮಾರಕ ಕಾವ್ಯ ಬಹುಮಾನ ದೊರತಿದೆ.
- ‘ಬಕುಲದ ಹೂಗಳು’ ಕೃತಿಗೆ 1992 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

***ಎಕ್ಕುಂಡಿಯವರ ಕಾವ್ಯದಲ್ಲಿನ ಪಂಥಗಳು***

- ಮಾರ್ಕ್ಸವಾದ
- ಲೆನಿನ್ ವಾದ
- ಮದ್ವಪಂಥ

***ಎಕ್ಕುಂಡಿಯವರ ಕಾವ್ಯಕ್ಕೆ ಪ್ರೇರಣೆ***

ಜಗದೀಶ ಚಂದ್ರ ಬೋಸರ ಸಾವು ಎಕ್ಕುಂಡಿಯವರ ಕವಿತೆ ಅರಳಲು ಪ್ರೇರಣೆಯಾಯಿತು. ಎಕ್ಕುಂಡಿಯವರೇ ಹೇಳಿರುವಂತೆ ಒಬ್ಬ ವಿಜ್ಞಾನಿಯ ಸಾವು ಒಬ್ಬ ಕವಿಯ ಹುಟ್ಟಿಗೆ ಕಾರಣವಾದದ್ದು ವಿಚಿತ್ರ ಸಂಗತಿ. ಎಕ್ಕುಂಡಿಯವರ ಕವಿತಾಶಕ್ತಿ ಹೊರಗೆ ಪ್ರಕಟವಾಗಲು ‘ನಾಡಹಬ್ಬ’ ನೆರವಾಯಿತು. ನಾಡಹಬ್ಬದ ಸಲುವಾಗಿ ಹುಬ್ಬಳಿಗೆ ಬರುತ್ತಿದ್ದ ವಿ.ಕೃ. ಗೋಕಾಕ್, ಬೇಂದ್ರೆ, ಬೆಟಗೇರೆ ಕೃಷ್ಣಶರ್ಮ, ಶಂ.ಬಾ. ಜೋಶಿ, ಶ್ರೀರಂಗ ಮುಂತಾದವರು ಇವರ ಸಾಹಿತ್ಯಾಸಕ್ತಿಯನ್ನು ವರ್ಧಿಸಿದರು.

ಎಕ್ಕುಂಡಿಯವರು ಕಾಲೇಜಿನಲ್ಲಿದ್ದಾಗಲೇ ಗಂಗಾಧರ ಚಿತ್ತಾಲ, ವರದರಾಜ್, ಹುಯಿಲಗೋಳ ನಾರಾಯಣರಾವ್, ರಾ.ಯ. ಧಾರವಾಡಕರ್, ವಿ.ಜಿ. ಭಟ್ಟ್ ಇವರೊಂದಿಗೆ ಸೇರಿ ‘ವರುಣಕುಂಜ’ ಎಂಬ ಬರಹಗಾರರ ಬಳಗವನ್ನು ಆರಂಭಿಸಿದರು. ಪ್ರತಿವಾರ ಕಾವ್ಯ, ಕಥೆ, ಪ್ರಬಂಧ, ವಿಮರ್ಶೆ ಬರೆದು ಚರ್ಚೆ ನೆಡಸುತ್ತಿದ್ದರು. ವಿ.ಕೃ ಗೋಕಾಕ್, ರಂ.ಶ್ರೀ. ಮುಗುಳಿಯವರ ಮಾರ್ಗದರ್ಶನವೂ ಈ ಬಳಗಕ್ಕೆ ಲಭಿಸಿ ಎಕ್ಕುಂಡಿಯವರ ‘ಮಾತು ಮಥಿಸಿ’ ಕವನ ಸಂಗ್ರಹಕ್ಕೆ ದಾರಿ ಮಾಡಿಕೊಟ್ಟಿತು.

ಎಕ್ಕುಂಡಿಯವರು ತಮ್ಮ ಕಾವ್ಯದ ಮೂಲಕ ಸ್ವತಃ ಅದನ್ನು ಒದುವ ವೈಖರಿಯ ಮೂಲಕ ಮನುಷ್ಯನ ನಿಟ್ಟುಸಿರನ್ನು ಪ್ರೀತಿ ಸ್ನೇಹಗಳ ಬೆಚ್ಚನೆಯ ಭಾವವನ್ನೂ ನಮಗೆ ಪರಿಣಾಮಕಾರಿಯಾಗಿ ಮುಟ್ಟಿಸಬಲ್ಲವರಾಗಿದ್ದರು. ಕಥೆ, ಕವನ, ಅನುವಾದ, ವಿಮರ್ಶೆಗಳೆಲ್ಲೆಲ್ಲಾ ಕೈಯಾಡಿಸಿರುವ ಎಕ್ಕುಂಡಿಯವರು ‘ಸಹಜ ಕವಿ’ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇವರ ಕಾವ್ಯಗಳಲ್ಲಿ 1) ಮಾರ್ಕ್ಸ ವಿಚಾರಧಾರೆ 2) ಮದ್ವರ ಸಿದ್ಧಾಂತ 3) ಲೆನಿನ್ನರ ವಾದ, ಪೌರಾಣಿಕ ಐತಿಹಾಸಿಕ ವ್ಯಕ್ತಿಗಳ ವಿಚಾರಗಳನ್ನು

ಕಾಣಬಹುದು. ಇವರ ಕಾವ್ಯಗಳಲ್ಲಿ ಗೇಯತೆ, ವರ್ಣನಾ ಕೌಶಲ್ಯವಿದೆ. ಮರೆಯಲಾಗದ ಇವರ ಮುಗ್ಧ ನಗೆಯಂತೂ ಎಲ್ಲರ ಮನವನ್ನ ಗೆದ್ದಿದೆ. ಸಜ್ಜನಿಕೆಯ ಸಂಭಾಷಣೆಯು ಸಜ್ಜನ ಕವಿಯನ್ನಾಗಿಸಿದೆ.

ಕವನದ ಕುಸುರಿ ಕೆಲಸಕ್ಕೆ ಸಮಾಜಿಕ ಆಶಯದ ನಂಟು ಇರಬೇಕೆಂದು ಹಂಬಲಿಸುವ ಸದಾ ಪ್ರಯೋಗಶೀಲರಾಗಿದ್ದ ಎಕ್ಕುಂಡಿಯವರ ಎದೆಯಾಳದಲ್ಲಿ ನಿಸರ್ಗ, ಜನರ ಮುಗ್ಧ ಮನಸ್ಸುಗಳು ಹಾಡುಕುಣಿತಗಳು ನೋವುಗಳು ನೆಲೆಯೂರಿ ಮನಸ್ಸನ್ನು ತಾಕಿ ಕಾವ್ಯ ರೂಪದಲ್ಲಿ ಹೊರಹೊಮ್ಮಿವೆ.

ಕವಿವಾಣಿ ಜನವಾಣಿಯಾದಾಗ ಮಾತ್ರವೇ ಸರ್ವಸ್ತರಗಳ ಜನರನ್ನು ತಲುಪಲು ಸಾಧ್ಯ. ಕಾವ್ಯವಾಗಲಿ ಸಾಹಿತ್ಯವಾಗಲಿ ಸಾಮಾನ್ಯರ ಬದುಕನ್ನು ಅಡಿಪಾಯವಾಗಿರಿಸಿಕೊಂಡು ರಚಿತವಾದಾಗ ಮಾತ್ರ ಅದು ಜೀವಂತವಾಗಿರುತ್ತದೆ ಎಂಬುದು ಎಕ್ಕುಂಡಿಯವರ ಅಭಿಪ್ರಾಯವಾಗಿತ್ತು. ಆನರ ಬದುಕಿನ ಕಥೆಯನ್ನು ಬಿಚ್ಚಿಡುವ ಎಕ್ಕುಂಡಿಯವರು ಮನುಷ್ಯನನ್ನು ವಿಶಾಲಗೊಳಿಸುವ ಎಲ್ಲವನ್ನೂ ಸ್ವೀಕರಿಸಿ ಸಂಕುಚಿತಗೊಳಿಸುವುದನ್ನು ಬಿಟ್ಟುಬಿಡಬೇಕೆಂಬ ನಿಲುವಿಗೆ ಬದ್ಧರಾದವರು. "ಸಫಲವಾಗಲಿ ವಿಫಲವಾಗಲಿ ಮನುಷ್ಯ ಕನಸ್ಸುಗಳನ್ನು ಹೊಂದಿರಬೇಕು ಕನಸ್ಸುಗಳು ಜೀವನವನ್ನು ಶ್ರೀಮಂತಗೊಳಿಸುತ್ತವೆ" ಎನ್ನುವ ಕನಸುಗಾರರು ಎಕ್ಕುಂಡಿ ಎಂದರೆ ತಪ್ಪಾಗಲಾರದು.

ಅವರೇ ಹೇಳಿರುವಂತೆ ನಮ್ಮ ಮಹಾಕವಿಗಳ ನುಡಿಗಳಲ್ಲಿ ಅದ್ಭುತವಾದ ಶಬ್ದಸಂಪತ್ತಿದ್ದರೂ ಅಲಂಕಾರಗಳಿದ್ದರೂ ಗುಡಿಸಲುಗಳವರೆಗೆ ತಲುಪಿಸಲು ಸಾಧ್ಯವಾಗುತ್ತಿಲ್ಲ. ಎನು ಬರೆದರು, ಎಷ್ಟು ಬರೆದರು, ಹೇಗೆ ಬರೆದರು ಎನ್ನುವುದಕ್ಕಿಂತ ಯಾರನ್ನ ಅದು ತಲುಪಿತು ? ಯಾರ ಮನವನ್ನು ಮುಟ್ಟಿತ್ತು, ತಟ್ಟಿತ್ತು ಎನ್ನುವುದು ಮುಖ್ಯವಾಗುತ್ತದೆ. ಎಕ್ಕುಂಡಿಯವರು ಜನರ ನೋವಿಗೆ ಕಾವ್ಯದ ಗರಿ ತೊಡಿಸಿ ಜನಸಾಮಾನ್ಯರ ಮನಸ್ಸಿನಲ್ಲೇ ನೆಲೆ ಪಡೆದರು.

ಮನುಷ್ಯ ಜೀವನದ ಸ್ಥಿತಿ ಸಾಧ್ಯತೆಗಳನ್ನು ಧ್ಯಾನಿಸುವುದೇ ಎಕ್ಕುಂಡಿಯವರ ಕಾವ್ಯ ಧರ್ಮದ ಯಾವತ್ತೂ ತುಡಿತವಾಗಿದೆ. ಎಕ್ಕುಂಡಿಯವರ ಕಾವ್ಯದ ಕೇಂದ್ರ ಮನುಷ್ಯನೇ ಆಗಿರುವುದಕ್ಕೂ ಅವರ ಪ್ರಧಾನ ಕಥನ ಕವನ ಆಗಿರುವುದಕ್ಕೂ ಕಾರಣಗಳು ಸ್ಪಷ್ಟವಾಗಿಯೇ ಇವೆ. 'ಬೆಳ್ಳಕ್ಕಿಗಳು' ಸಂಕಲನದ ಕೆಲವು ರಚನೆಗಳು ಕೊಂಚ ಭಿನ್ನವೆನಿಸಬಹುದಾದರೂ ಒಟ್ಟಾರೆ ಎಕ್ಕುಂಡಿ ಕಾವ್ಯ ಪ್ರಪಂಚ ಕಥನ ಕವನಗಳಿಂದಲೇ ಸಮೃದ್ಧವಾಗಿದೆ. 'ಕೊರಗು' ಎಂಬ ಕವನದಲ್ಲಿ ಎನಿಲ್ಲ ಎಂದು ಹೇಳಿಕೊಳ್ಳುವಾಗ 'ಬುತ್ತಿ' ಎಂಬ ಕವನದಲ್ಲಿ ಏನಾಗಬೇಕು ಎಂದು ಒತ್ತಿ ಹೇಳುವಾಗ 'ಬೆಳ್ಳಕ್ಕಿಗಳು' ಎಂಬ ಕವನದಲ್ಲಿ ಭರವಸೆಯ ಹಾಡನ್ನು ಹಾಡುವಾಗ 'ಶರಣು' ಎಂಬ ಕವನದಲ್ಲಿ ತನ್ಮತೆಯಿಂದ ಪ್ರಾರ್ಥಿಸುವಾಗ ಕೂಡ ಮನುಷ್ಯವಸ್ಥೆಯ ನೆಲೆಗಳಿಂದ ಎಕ್ಕುಂಡಿ ಕವನಗಳು ಬಿಡುಗಡೆ ಹೊಂದಿವೆ ಎನಿಸುವುದಿಲ್ಲ.

ಶ್ರೀಯುತರು ಭಾಷೆಯನ್ನು ಎಷ್ಟು ಚಿತ್ರಮಯವಾಗಿ ಬಳಸುತ್ತಾರೆಂದರೆ ಅವರು ಕಟ್ಟುವ ಆವರಣಗಳು ಒಂದಕ್ಕಿಂತ ಹೆಚ್ಚು ಪ್ರತ್ಯೇಕವೆಂದೆ ಅನನ್ಯವಾದ್ದದೆಂದೇ ತೋರುತ್ತದೆ. ಪ್ರಕೃತಿ, ಪುರಾಣ, ಮತ್ತು ಸಮಕಾಲೀನ ಜಗತ್ತುಗಳ ಚಿತ್ರಗಳು ಉಚಿತವಾದ

ವಿವರಗಳಿಂದಲೇ ಅಧಿಕೃತವಾಗುತ್ತವೆ. ಇಷ್ಟಿದ್ದೂ ಬೆಳ್ಳಕ್ಕಿಗಳು ಎಕ್ಕುಂಡಿ ಕಾವ್ಯದಲ್ಲಿ ತಾವಾಗಿಯೇ ನಿಜವಾಗುವುದಕ್ಕಿಂತ ಹೆಚ್ಚಾಗಿ ತತ್ವಗಳಾಗಿ, ಪ್ರತೀಕಗಳಾಗಿ ತಮ್ಮ ಅಸ್ತಿತ್ವವನ್ನ ಸ್ಥಾಪಿಸಿಕೊಳ್ಳುತ್ತವೆ ಎನಿಸುತ್ತದೆ.

ಕನ್ನಡ ಕಥನ ಕವಿಯೆಂದೆ ಪ್ರಸಿದ್ಧರಾದ 'ಸುಬ್ಬಣ್ಣ ರಂಗನಾಥ ಎಕ್ಕುಂಡಿ' ಯವರು ಇವರ ಸಮಾಕಾಲೀನರಾದ ಆಧುನಿಕ ಯುಗದ ಇನ್ನೊಬ್ಬ ಮಹಾಕವಿಯಾದ ಶ್ರೀ ಪು.ತಿ.ನ ಅವರಿಂದ 'ಸಹಜಕವಿ' ಎಂದೇ ಕೀರ್ತಿತರಾದರೂ ವಿ.ಕೃ.ಗೋಕಾಕ್ , ರಂ.ಶ್ರೀ.ಮುಗಳಿ ಅವರಂತಹ ವಿದ್ವಾಂಸರಿಂದ ಸ್ಫೂರ್ತಿ ಪ್ರೇರಣೆಗಳನ್ನು ಪಡೆದ ಅವರು ಪಾಶ್ಚಾತ್ಯರಲ್ಲಿ ಕೀಟ್ಸ್ ತಮ್ಮ ಮೇಲೆ ತುಂಬಾ ಪ್ರಭಾವ ಬೀರಿದಂತೆಯೇ ಮಾರ್ಕ್ಸ್ ವಾದಿ ಚಿಂತನೆಯೂ ತಮ್ಮ ಧ್ಯೇಯ ದೃಷ್ಟಿಗಳನ್ನು ರೂಪಿಸುತ್ತದೆಂಬುದನ್ನು ಒಪ್ಪಿ ನಡೆದಿದ್ದಾರೆ. ಅವರ ಇನ್ನೊಂದು ಸ್ಫೂರ್ತಿಯ ಕೇಂದ್ರವೆಂದರೆ ಶ್ರೀ ಮಧ್ವಚಾರ್ಯರ ವಿಚಾರಧಾರೆ. ಇಂತಹ ಕಾವ್ಯಾತ್ಮಕ , ವೈಚಾರಿಕ ಹಾಗೂ ಸಾಮಾಜಿಕ ಸಂವೇದನೆಗಳಿಂದ ಪರಿಪುಷ್ಟವಾಗಿದ್ದ ಅವರ ಸಾಹಿತ್ಯಿಕ ಪ್ರತಿಭೆ ಕವಿತೆಯ ಕ್ಷೇತ್ರದ ಜೊತೆಗೆ ಕಥೆ , ವಿಮರ್ಶೆ , ಜೀವನ ಚರಿತ್ರೆ ಮತ್ತು ಅನುವಾದ ಕ್ಷೇತ್ರದಲ್ಲೂ ಗರಿಗೆದರಿತ್ತು.

ಪ್ರೌಢಶಾಲೆಯ ಅಧ್ಯಾಪಕರಾಗಿದ್ದರೂ ರೋಮ್ ವಿಶ್ವ ವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕತ್ವದ ಗೌರವಕ್ಕೆ ಪಾತ್ರರಾಗಿದ್ದರೆಂಬುದು ವಿಶೇಷವಾದ ಸಂಗತಿಯಾಗಿದೆ. ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳ ಜೊತೆಗೆ ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿಯನ್ನೂ (1970) ಗಳಿಸಿದ ಹಿರಿಮೆ ಅವರದ್ದಾಗಿತ್ತು.

ಸು.ರಂ.ಎಕ್ಕುಂಡಿ ಹಿರಿಯ ಸಾಧನೆಯ ಜನ ಮಾನಸದ ಕವಿ. ಆಧುನಿಕ ಕನ್ನಡ ಕಾವ್ಯದ ನವೋದಯ ಮಾರ್ಗದಲ್ಲಿ ನಡೆದು ಬಂದ ಅವರು ಹೆಚ್ಚಾಗಿ ಗಮನ ಸೆಳೆದದ್ದು ಅವರ ಕಥನ ಕವನಗಳಿಂದಲೇ ಎಂದರೆ ತಪ್ಪಾಗಲಾರದು. ಅದು ಅವರ ಒಟ್ಟು ಕಾವ್ಯ ಸೃಷ್ಟಿಯ ಒಂದು ಪ್ರಧಾನ ಭಾಗ. ಉಳಿದ ಭಾಗವೂ ಅಷ್ಟೇ ಸತ್ವಯುತವಾಗಿದೆ. ಆ ಪ್ರಕಾರ ಅವರ ಕಾವ್ಯದ ವಿಶಿಷ್ಟ ಪ್ರಕಾರವಾದಂತೆ ಕಾಣಿಕೆಯೂ ಹೌದು. ತಮ್ಮ ಕಾಲದ ಹಿರಿಯರ ಕಥನ ಕಾವ್ಯದೆದುರು ಸೋಪಜ್ಞತೆಯಿಂದ ಮೆಚ್ಚುಗೆಯ ಕಥನ ಕಾವ್ಯ ರಚಿಸಿದುದು ಅವರ ಕವಿ ವ್ಯಕ್ತಿತ್ವದ ಹೆಗ್ಗಳಿಕೆಯನ್ನು ಮೆರೆಯುತ್ತದೆ. ಕನ್ನಡ ಕಾವ್ಯದಲ್ಲಿ ಅವರಿಗೆ ಅವರದ್ದೇ ಆದ ವಿಶಿಷ್ಟ ಸ್ಥಾನವಿದೆ.

ಇಂಗ್ಲೀಷ್ ಕಾವ್ಯದ ಆಳ ಅಧ್ಯಯನಗೈದ ಅವರ ಮೇಲೆ ಜಾನ್ ಕೀಟ್ಸ್ ಅಪಾರ ಪ್ರಭಾವ ಬೀರಿದ್ದನು. ಕವಿಯು ಕೇವಲ ದಂತಗೋಪುರದಲ್ಲಿ ಕುಳಿತು ಕಾವ್ಯ ರಚಿಸಿದರೆ ಸಾಲದು, ಸುತ್ತಲಿನ ಸಾಮಾಜಿಕ ಪರಿಸರಕ್ಕೆ ಸ್ಪಂದಿಸಬೇಕು ಎಂದು ಅರಿತಿದ್ದ ಅವರು ಬೆಸ್ತರ , ಬಡವರ , ಹಳ್ಳಿಗರ ಜೀವನ , ಸಮಸ್ಯೆಗಳಿಗೂ ಸಮಾನವಾಗಿ ಪ್ರತಿಕ್ರಯಿಸಿದರು. ಭಾವಗೀತೆಗಳ ಎಲ್ಲಾ ಲಕ್ಷಣಗಳನ್ನು ಹೊಂದಿದ ನೂರಾರು ಪದ್ಯಗಳನ್ನು ಅವರು ರಚಿಸಿದ್ದಾರೆ. 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ' ಎಂದು ಹೇಳಿದ ದ.ರಾ.ಬೇಂದ್ರೆಯವರಂತೆ ಈ ಭಾವಗೀತೆಗಳು ಮಧುರವಾದ ಹಾಡುಗಳಾಗಿ ಸಂಗೀತಕ್ಕೆ ಒಳಪಟ್ಟುದುದು ಉಂಟು. ರಾಷ್ಟ್ರ ಪ್ರೇಮದ ಹಲವಾರು ಕವನಗಳನ್ನು ಅವರು ರಚಿಸಿದ್ದಾರೆ. ಪ್ರಕೃತಿ ಚೆಲುವನ್ನು ಎಷ್ಟು ಹಾಡಿದರೂ ದಣಿವಿಲ್ಲ ಈ ಕವಿಗೆ.

ಈ ರೀತಿಯ ದೊಡ್ಡ ಭಂಡಾರವೇ ಅವರಿಂದ ಸೃಷ್ಟಿಯಾಗಿದೆ. 'ಬಕುಲದ ಹೂಗಳು' ರಾಷ್ಟ್ರಮಟ್ಟದ ಗಮನ ಸೆಳೆದ ಕವನ ಸಂಕಲನ.

ಸು.ರಂ.ಎಕ್ಕುಂಡಿಯವರ ಕಥನ ಕವನಗಳ ಬಗೆಗೆ ಹೇಳಬೇಕೆಂದರೆ ಅವರ ಒಟ್ಟು ಕಾವ್ಯ ಸೃಷ್ಟಿಯಲ್ಲಿ ಅವುಗಳದ್ದೇ ಸಿಂಹಪಾಲು. ವಸ್ತುಗಳ ಆಯ್ಕೆಗಾಗಿ ಬಹು ಪ್ರತಿಶತ ಪುರಾಣ , ವೇದ , ಇತಿಹಾಸ , ರಾಮಾಯಣ , ಮಹಾಭಾರತ , ಭಾಗವತಗಳೇ ಅವರಿಗೆ ಮೂಲ ಸ್ತೋತ್ರಗಳು. ಭಾರತೀಯ ಸಂಸ್ಕೃತಿಯ ಸಂಪನ್ನವಾದ ಹಿನ್ನಲೆಯ ಅವರ ಕವನಗಳು ಭಾರತೀಯ ಮೌಲ್ಯಗಳಿಂದ ತುಂಬಿ ತುಳುಕುತ್ತಿವೆ. ಅವರ ತಾದಾತ್ಮ್ಯ ಈ ದಿಕ್ಕಿನಲ್ಲಿ ಅಚ್ಚರಿಗೊಳಿಸುತ್ತದೆ. ಶ್ರೇಷ್ಠ ಕಾವ್ಯದ ಎಲ್ಲಾ ಅಂಗಗಳ ಅಪೂರ್ವ ಅನುಭವಕ್ಕೆ ದಾರಿ ಮಾಡಿಕೊಡುತ್ತವೆ.

"ಸುಬ್ಬಣ್ಣ ನಿನ್ನಂತೆ ಕಥನ ಕವನಗಳನ್ನು ಯಶಸ್ವಿಯಾಗಿ ಬರೆಯುವವರು ವಿರಳ ಮತ್ತು ಅಪರೂಪ" ಎಂದು ಕವಿ ವಿ.ಕೃ.ಗೋಕಾಕ್ ಒಂದು ಸಂದರ್ಭದಲ್ಲಿ ಉದ್ಗರಿಸಿದ್ದರು. ಅದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲವೆಂದು ಹೇಳಬೇಕು. ನಿಜವಾದ ಕಾವ್ಯ ನೇರವಾಗಿ ಓದುಗರ ಹೃದಯಕ್ಕೆ ತಲುಪಬೇಕು ಎಂಬ ಯಶಸ್ಸಿನ ಸೂತ್ರವೊಂದಿದೆ. ಆ ದೃಷ್ಟಿಯಿಂದ ಎಕ್ಕುಂಡಿಯವರ ಈ ಕಾವ್ಯ ಓದುಗರಲ್ಲಿ ಅಸಾಧಾರಣ ಸ್ಪಂದನವನ್ನು ಉಂಟುಮಾಡುತ್ತದೆ. ಉತ್ತಮ ಕಾವ್ಯವನ್ನು ಆಸ್ವಾದಿಸಿದ ಆನಂದದ ಸಂಸ್ಕಾರವನ್ನು ಉಂಟುಮಾಡುತ್ತದೆ.

***ಕಾವ್ಯ ವರ್ಗೀಕರಣ :-***

ಎಕ್ಕುಂಡಿಯವರ ಒಟ್ಟು ಕಾವ್ಯವನ್ನು 1.ಕಥನ ಕವನಗಳು 2.ಭಾವಗೀತೆಗಳು 3.ಸಾಮಾಜಿಕ ಚಿಂತನಪರ ಭಾವಗೀತೆಗಳು 4.ರಾಷ್ಟ್ರಪ್ರೇಮದ ಪದ್ಯಗಳು 5.ಪ್ರಕೃತಿ ವರ್ಣನೆಯ ಪದ್ಯಗಳು 6.ಭಕ್ತಿಕೇಂದ್ರಿತ ಪದ್ಯಗಳು 7.ನೀತಿಪರ ಕವನಗಳು ಎಂದು ವರ್ಗೀಕರಿಸಬಹುದು. ಇದು ಸಾಮಾನ್ಯ ಓದುಗರಿಗೆ ಅರ್ಥೈಸಿಕೊಳ್ಳಲು ಅನುಕೂಲವಾಗುವುದು. ಸು.ರಂ.ಎಕ್ಕುಂಡಿಯವರಿಗೆ ಅವರ ಕಾವ್ಯಕ್ಕೆ 'ಶರಣೆಂಬೆವು ನಾವು' ಅವರ ಕಾವ್ಯದ ಅಧ್ಯಯನ ಮಾಡಿದವರಿಗೆ ಹಾಗೆ ಅನಿಸುವಷ್ಟು ಹಿರಿಯ ಮತ್ತು ಪ್ರೌಢಕಾವ್ಯ ಸೃಷ್ಟಿಸಿದ ಕವಿ ಅವರಾಗಿದ್ದಾರೆ.

ಭಕ್ತಿ , ನಂಬಿಕೆ , ಆದರ್ಶ ಕಥಾನಕಗಳು , ನಿಸರ್ಗ ಪ್ರೇಮ ಅವರ ಕಾವ್ಯದಲ್ಲಿವೆ. ಮಾನವ ಪ್ರೇಮ , ಅನುಕಂಪ , ಪ್ರೀತಿ , ಸ್ನೇಹ , ಮಧುರತೆಗಳಿಂದ ಅಂತಃಕರಣದ ಕವಿ ತನ್ನ ಕಾವ್ಯದ ಸತ್ವಯುತ ಸಿಹಿಫಲಗಳನ್ನೇ ಈ ಮೌಲ್ಯದಿಂದ ಉಣಬಡಿಸಿದ್ದಾನೆ. ಅವರ ವಾತ್ಸಲ್ಯ ದೃಷ್ಟಿ ಅವರ ಕಾವ್ಯದಷ್ಟೇ ಅಜರಾಮರ.

ಕನ್ನಡ ಕಾವ್ಯಕ್ಕೆ ಅವರು ಕೊಟ್ಟ ಕಾಣ್ಕೆಗೆ ಕನ್ನಡಿಗರು ಮೆಚ್ಚಬೇಕು ಕೃತಜ್ಞರಾಗಿರಬೇಕು. ಮಾನವನ ಹಿತವನ್ನು ಸದಾ ಕಾಲ ಸತತ ಮೊಳಗುವ ಅವರ ಕಾವ್ಯ ರಮಣೀಯ ಅಂದದಿಂದ , ಒಲವಿನ ಛಾಯೆಯಿಂದ , ಸೊಬಗಿನಿಂದ ಓದುಗರ ಮನದಾಳದಲ್ಲಿ ಸ್ಥಾಯಿಯಾಗಿ ನಿಲ್ಲಬಲ್ಲ ಅಂತಃಸತ್ವದಿಂದ ಕೂಡಿದೆ. ಒಂದು ರೀತಿಯ ಅಭಿಜಾತ ಸಾಧನೆಯ ಸಿದ್ಧಿ ಅವರ ಕಾವ್ಯದಲ್ಲಿದೆ. ಅವರ ಬದುಕಿನಷ್ಟೆ ಅವರ ಕಾವ್ಯ ಸಾರ್ಥಕತೆಯನ್ನು ಪಡೆದಿದೆ.

## ಸಮಾರೋಪ :–

ಮನುಷ್ಯ ಬದುಕುವುದು ಮೂಲತಃ ಸಂಸ್ಕೃತಿಯಿಂದ ಎಂದು ನಂಬಿದವರು. ಅದೇ ನಂಬಿಕೆಯಿಂದ ಬಾಳನ್ನು ಪ್ರೀತಿಸಿದವರು ಅವರು. ಕವಿ ಕಲ್ಪನಾ ಲೋಕ ಸೃಷ್ಟಿಸುವುದು ಮನುಷ್ಯನನ್ನು ಸಂಸ್ಕರಿಸಲು ಎಂದು ನಂಬಿದ ಕವಿ ಅವರು. ಉದಾತ್ತ ಯೋಚನೆಗಳು ಪ್ರತಿಯೊಬ್ಬರಿಗೂ ಅನ್ನ ನೀರಿನಷ್ಟೇ ಅವಶ್ಯಕ. ಅವರು ಅತ್ಯಂತ ಸರಳ ಬದುಕು ನಡೆಸಿ ಸಾಮಾನ್ಯರಾಗಿದ್ದ ಅಸಾಮಾನ್ಯರು.

ನಿಸರ್ಗ ತತ್ವವನ್ನು ತಮ್ಮ ಬಾಳಿನ ಸೈದ್ಧಾಂತಿಕ ಕೇಂದ್ರವನ್ನಾಗಿಟ್ಟುಕೊಂಡು ಮನುಷ್ಯ ಜೀವನದೊಡನೆ ಚಿನ್ನದ ಕೊಂಡಿಯನ್ನಾಗಿ ಮಾಡಿದ ಕಾವ್ಯ ಅವರದು. ಹಾಗೆಂದು ಮನುಷ್ಯನ ಚಿಂತನಾಪರವಾದ ಕಾಳಜಿಗಳನ್ನು ಅವರ ಕಾವ್ಯದಲ್ಲಿ ಅರ್ಥಪೂರ್ಣವಾಗಿ ಧ್ವನಿಸುತ್ತಾರೆ. ಅವರ ಪುರಾಣ ಪ್ರಪಂಚ ಅವರ ಕಥಾನಕಗಳೊಂದಿಗೆ ಚಿರಸ್ಥಾಯಿಯಾಗಿ ಉಳಿಯುವ ಪ್ರಪಂಚ. ಒಟ್ಟಿನಲ್ಲಿ ಮನುಷ್ಯ ತನ್ನ ಆತ್ಮದ ಕ್ಷಿತಿಜ ಅರಿಯುವಲ್ಲಿ ಇವೆಲ್ಲಾ ಬೃಹತ್ ಪ್ರಯೋಜನಕಾರಿಯಾಗಿವೆ. ಪರಂಪರೆಯನ್ನು ಬೆಳಗುತ್ತಾ ಆಧುನಿಕಕ್ಕೆ ಮುಖವಿಟ್ಟು ಅವರ ಕಾರ್ಯ ಅಪೂರ್ವಕಾಂತಿ, ಶಾಂತಿಗಳಿಂದ ಬೆಳಗಿದೆ,ತೊಳಗಿದೆ,ಬೆಳ್ಳಕ್ಕಿಗಳಂತೆ ಶುಭ್ರ. ಸದಾ ಚಟುವಟಿಕೆಯಿಂದ ಕೂಡಿದ ಅವರ ಕಾವ್ಯ ಒಸಗೆ ಓದುಗರಿಗೆ ಸದಾ ಆನಂದದ ಚಿಂತನೆಯ ಬುಗ್ಗೆಯಾಗಬಲ್ಲದು.

## ಗ್ರಂಥ ಋಣ :–


1. *ಎಕ್ಕುಂಡಿ ನಮನ – (ಸಂ) ಜಿ.ಎನ್.ಮೋಹನ್. ಕರ್ನಾಟಕ ಸಂಘ ಪುತ್ತೂರು.ದ.ಕ.ಜಿಲ್ಲೆ–1995*
2. *ಬಕುಲದ ಹೂಗಳು – ಸು.ರಂ.ಎಕ್ಕುಂಡಿ. ಕ.ಸಾ.ಪ. ಬೆಂಗಳೂರು – 1991*
3. *ಬೆಳ್ಳಕ್ಕಿ ಹಿಂಡು–ಸಮಗ್ರ ಕಾವ್ಯ – ಸು.ರಂ.ಎಕ್ಕುಂಡಿ – (1923–1995)(ಸಂ)ಡಿ.ವಿ.ಪ್ರಹ್ಲಾದ್.*